**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**<u>ಸಿ.ಸಿ ನಂಃ 44/ 2017</u>**

| | | |
|---|---|---|
| ಸಾಕ್ಷಿಯ ಹೆಸರುಃ | ಹುಸೇನಪ್ಪ | ಪ್ರಾಸಾಃ 03 |
| ತಂದೆ/ಗಂಡನ ಹೆಸರುಃ | ನಾಗಪ್ಪ ಊರನ | ಚಾಸಾಃ 04 |
| ವಯಸ್ಸುಃ | 48 ವರ್ಷ | ದಿಃ 15-12-2021 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಕೊಟಗೇರಾ | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>**

ನನಗೆ ಚಾಸಾಃ1 ಮತ್ತು 5 ರವರ ಪರಿಚಯ ಇಲ್ಲ. ದಿಃ 05-10-2016 ರಂದು ನಾನು ಗುನ್ನೆ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಪೋಲಿಸರು ನನ್ನ ಸಮಕ್ಷಮ ಯಾವುದೇ ಗುನ್ನೆ ಸ್ಥಳದ ಪಂಚನಾಮೆ ಮಾಡಿರುವುದಿಲ್ಲ. ನನಗೆ ಈ ಪ್ರಕರಣದ ಘಟನೆಯ ಬಗ್ಗೆ ಆಗಲಿ ಅಥವಾ ಘಟನಾ ಸ್ಥಳದ ಬಗ್ಗೆ ಆಗಲಿ ನನಗೆ ಮಾಹಿತಿ ಇರುವುದಿಲ್ಲ.

**( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ</u>**

ದಿಃ 05-10-2016 ರಂದು ಮಃ 2-30 ರಿಂದ 3-30 ಗಂಟೆಯವರಗೆ ಚಿತ್ತಾಪೂರದಲ್ಲಿರುವ ನಾಗಾವಿ ಯಲ್ಲಮ್ಮ ದೇವಸ್ಥಾನದ ಮುಂದೆ ಚಾಸಾಃ19 ರವರು ತೋರಿಸಿ ಕೊಟ್ಟ ಮೇರೆಗೆ ನನ್ನ ಮತ್ತು ಚಾಸಾಃ5 ರವರ ಸಮಕ್ಷಮದಲ್ಲಿ ಪೋಲಿಸರು ಈ ಪ್ರಕರಣದ ಗುನ್ನೆ ಸ್ಥಳದ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಗುನ್ನೆ ಸ್ಥಳ ಪಂಚನಾಮೆ ಮತ್ತು ಅದಕ್ಕೆ ಲಗತ್ತಾದ ಸ್ಥಳದ ನಕಾಶೆಯನ್ನು ತೋರಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಗುನ್ನೆ ಸ್ಥಳದ ಪಂಚನಾಮೆಯನ್ನು ನಿಪಿ-3 ಎಂದು, ಅದಕ್ಕೆ ಲಗತ್ತಾದ ಸ್ಥಳ ನಕಾಶೆಯನ್ನು ನಿಪಿ-4 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-3(ಎ) ಮತ್ತು 4(ಎ)ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನಿಪಿ-3 ಮತ್ತು 4 ರಲ್ಲಿ ತಾನು ಪೋಲಿಸರ ಹೇಳಿಕೆಯ ಮೇರೆಗೆ ಠಾಣೆಯಲ್ಲಿ

ಸಹಿಯನ್ನು ಹಾಕಿರುತ್ತೇನೆ ಹಾಗೂ ನಿಪಿ-3 ಮತ್ತು 4 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀ ಸವಾಲು ಆರೋಪಿತರ ಪರಃ ಶ್ರೀ ಎಂ ಬಿ ಪಿ ವಕೀಲರವರಿಂದಃ**

ಯಾವುದೇ ಪಾಟೀ ಸವಾಲು ಇಲ್ಲ.

**ಮರುವಿಚಾರಣೆ : ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**